“ಈಗಿನ್ನು ಕಟ್ಟಿಗೆ ಒಡೆಯುತ್ತಿದ್ದನಲ್ಲಾ!...” ಎಂದಳು.

“ಹೌದು, ಕಟ್ಟಿಗೆ ಒಡೆಯುತ್ತಲೇ ಸತ್ತು ಹೋದ. ದೊಪ್ಪನೆ ನೆಲಕ್ಕೆ ಬಿದ್ದ. ಈಗೇನು ಮಾಡುವುದು?...” ಎಂದರು ಪಂಡಿತರು ಆತಂಕದಲ್ಲಿ.

“ಮಾಡೊದೇನು!... ಸಮಗಾರರಿಗೆ ಹೆಣ ಎತ್ತಿಕೊಂಡು ಹೋಗಲು ಹೇಳಿರಿ...” ಎಂದಳು ಸಮಾಧಾನ ಚಿತ್ತದಲ್ಲಿ.

ಸುದ್ದಿ ಇಡೀ ಊರಿಗೆ ಹಬ್ಬಿತು. ಎಲ್ಲಾ ಬ್ರಾಹ್ಮಣರ ಕೇರಿಯೇ ಆಗಿತ್ತು. ಒಂದು ಮನೆ ಮಾತ್ರ ಗೊಂಡನದಾಗಿತ್ತು. ಬ್ರಾಹ್ಮಣರ ಕೇರಿಯ ರಸ್ತೆಗೆ ಊರ ಜನ ಬರುತ್ತಿರಲಿಲ್ಲ. ಬಾವಿ ಕಡೆಯ ರಸ್ತೆಯಲ್ಲಿ ಮಾತ್ರ ಓಡಾಡುತ್ತಿದ್ದರು. ಈಗ ದುಖಿ ಸಮಗಾರನ ಹೆಣದ ಮುಂದಿನಿಂದ ನೀರು ತರಲು ಬಾವಿಗೆ ಹೋಗುವುದಾದರೂ ಹೇಗೆ ಎಂಬ ಪ್ರಶ್ನೆ ಎದುರಾಯಿತು.

ಒಂದು ಅಜ್ಜಿ ಬಂದು ಪಂಡಿತರಿಗೆ,

“ನೀವು ಹೆಣ ಎತ್ತಿ ಹಾಕಿಸುವುದಿಲ್ಲವೇನು?... ಊರಲ್ಲಿ ಜನ ನೀರು ಕುಡಿಯಬೇಕೋ ಬೇಡವೋ?...” ಎಂದಳು.

ಗೊಂಡ ಇಡೀ ಪಂಡಿತರ ವ್ಯವಹಾರ ಹತ್ತಿರದಿಂದ ಬಲ್ಲವನಾಗಿದ್ದ. ದುಖಿಗೆ ವೃಥಾಃ ತೊಂದರೆ ಕೊಟ್ಟ ಸಂಗತಿ ತಿಳಿದವನಾಗಿ ಸಮಗಾರ ಸಮೂಹಕ್ಕೆ ಎಚ್ಚರಿಕೆ ನೀಡಿದ.

“ಹುಶಾರ್... ನೀವು ಯಾರೂ ಹೆಣ ಎತ್ತಲು ಹೋಗಬೇಡಿ. ಸುಮ್ಮನೆ ಸಿಕ್ಕಿಹಾಕಿಕೊಳ್ಳೀರಿ ನೋಡಿ. ಪೊಲೀಸ್ ವಿಚಾರಣೆಯಾಗಲಿ. ಸುಮ್ಮನೆ ಒಬ್ಬ ಬಡವನ ಜೀವ ತಿಂದನಲ್ಲಾ... ಪಂಡಿತನಾಗಿದ್ದರೆ ಅವನ ಮನೆಗಾಗಲಿ...” ಎಂದ.

ಪಂಡಿತರು ಬಂದು ಸಮಗಾರರಲ್ಲಿ ಕೋರಿದರೂ ಯಾರೊಬ್ಬರೂ ಶವ ಎತ್ತಲು ಬರಲಿಲ್ಲ. ದುಖಿಯ ಮಡದಿ ಮಗಳು ಗೋಳಾಡುತ್ತಾ ಓಡಿ ಬಂದರು. ಪಂಡಿತರ ಮನೆ ಬಾಗಿಲಿಗೆ ಬಂದು ತಲೆ ಚಚ್ಚಿಕೊಳ್ಳುತ್ತಾ ರೋಧಿಸತೊಡಗಿದರು. ಜತೆಯಲ್ಲಿ ಹತ್ತಾರು ಸಮಗಾರ್ತಿಯರು ಸೇರಿಕೊಂಡರು. ಕೆಲವರು ಅವಳಿಗೆ ಸಮಾಧಾನ ಪಡಿಸಿದರು. ಇನ್ನು ಕೆಲವರು ತಾವೇ ದುಃಖಿಸಿದರು. ಸಮಗಾರರು ಮಾತ್ರ ಒಬ್ಬರು ಅಲ್ಲಿ ಕಾಣಲಿಲ್ಲ. ಪಂಡಿತರು ಪುನಃ ಸಮಗಾರರಲ್ಲಿ ಹೋಗಿ ಹೆದರಿಸಿ ಬೆದರಿಸಿ ನೋಡಿದರು. ತಿಳಿವಳಿಕೆ ನೀಡಿದರು. ಕೋರಿದರು. ವಿನಂತಿಸಿ ಕೊಂಡರೂ ಯಾವ ಸಮಗಾರನು ಜಗ್ಗಲಿಲ್ಲ. ತಮ್ಮದೇ ಹಟ ಸಾಧನೆಗೆ ಮುಂದಾದರು. ಅನಿವಾರ್ಯವಾಗಿ ಪಂಡಿತರು ಅಲ್ಲಿಂದ ಸಪ್ಪೆ ಮುಖದೊಂದಿಗೆ ಹಿಂತಿರುಗಬೇಕಾಯಿತು.

ಮಧ್ಯರಾತ್ರಿ ಮಳೆ ಜಿನುಗು ಶುರುವಾಯಿತು. ಶವ ಮಳೆಯಲ್ಲಿ ನೆನೆಯುತ್ತಾ ಬಿದ್ದುಕೊಂಡಿತು. ಸಮಗಾರರು ಯಾರು ಹೆಣ ಎತ್ತಲು ಬರಲಿಲ್ಲ. ಬ್ರಾಹ್ಮಣರು ಶವ ಮುಟ್ಟುವಂತಿಲ್ಲವಲ್ಲಾ!... ಹಾಗೆ ಯಾವ ಶಾಸ್ತ್ರದಲ್ಲಿ ಬರೆಯಲಾಗಿದೆಯೋ!?... ಪಂಡಿತರ ಬೇಗುದಿ ಹೆಚ್ಚಿತು. ಮನೆ ಮುಂದೆ ಹೆಣ ಇರಿಸಿಕೊಂಡು ದಿನ ಕಳೆಯುವುದಾದರೂ ಹೇಗೆ?... ಸಮಗಾರ್ತಿಯರ ರೋಧನ ತಾರಕಕ್ಕೇರಿತು. ವಿಚಿತ್ರ ತಳಮಳ ಹೆಚ್ಚಿದಂತೆ ಪಂಡಿತರ ಮಡದಿ,

“ಈ ರಾಕ್ಷಸೀಯರು ನಮ್ಮ ನೆಮ್ಮದಿಯನ್ನೇ ಹಾಳು ಮಾಡಿಬಿಟ್ಟರು... ಅಷ್ಟೊಂದು ಕಿರುಚಿಕೊಳ್ಳುವುದರಿಂದ ಇವರ ಗಂಟಲು ಹರಿದು ಹೋಗಲ್ಲವೇನೊ...” ಎಂದಳು.

“ಅತ್ತರೆ ಅಳಲಿ ಬಿಡು, ಈ ಚುಡೇಲುಗಳು ಎಷ್ಟೊತ್ತು ಕಿರುಚಿ ಅತ್ತಾರು?... ಜೀವಂತ ಇದ್ದಾಗ ಯಾರೂ ಅವನಿಗೆ ಕ್ಯಾರೇ ಅಂದಿರಲಿಲ್ಲ. ಈಗ ನೋಡು, ಸತ್ತ ಮೇಲೆ ಎಲ್ಲಾ ಬಂದಿದ್ದಾರೆ...” ಎಂದರು ಪಂಡಿತರು.

“ಮನೆ ಮುಂದೆ ಸಮಗಾರ್ತಿಯರು ಅಳೋದು ಅಪಶಕುನ ಅಲ್ವಾ?...” ಎಂದಳು ಮಡದಿ.